**FEBRUARY 23,2025**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

ಕರ್ನಾಟಕದ ಬಿಳಿಗಿರಿ ರಂಗಸ್ವಾಮಿ ದೇಗುಲ (ಬಿ.ಆರ್.ಟಿ) ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹುಲಿಗಳ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಿದೆ. ಹುಲಿಯನ್ನು ಪೂಜಿಸುವ ಸೋಲಿಗ ಬುಡಕಟ್ಟು ಜನಾಂಗದವರಿಗೆ ಇದರ ಶ್ರೇಯಸ್ಸು ಸಲ್ಲುತ್ತದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹೇಳಿದರು. ಇಂದು ಪ್ರಸಾರಗೊಂಡ ಜನಪ್ರಿಯ ಮನ್ ಕಿ ಬಾತ್ ನ 119 ನೇ ಸಂಚಿಕೆಯಲ್ಲಿ ದೇಶ ವಿದೇಶಗಳಲ್ಲಿನ ಭಾರತೀಯರನ್ನುದ್ದೇಶಿಸಿ ಮಾತನಾಡಿದ ಅವರು, ಪ್ರಕೃತಿಯೊಂದಿಗಿನ ಸಹಬಾಳ್ವೆಯಿಂದ ಸ್ಥಳೀಯ ಜನರಿಂದ ಹುಲಿ, ಏಷ್ಯಾಟಿಕ್ ಸಿಂಹಗಳು, ಘೇಂಡಾಮೃಗ ಮತ್ತು ಬಾರಾಶಿಂಗ್ ಗಳ ಸಂಖ್ಯೆ ಕಳೆದ ಹಲವು ವರ್ಷಗಳಿಂದ ವೇಗವಾಗಿ ವರ್ಧಿಸುತ್ತಿದೆ ಎಂದರು. ಇತ್ತೀಚೆಗೆ ಉತ್ತರಾಖಂಡದಲ್ಲಿ ಮುಕ್ತಾಯಗೊಂಡ ರಾಷ್ಟ್ರೀಯ ಕ್ರೀಡಾಕೂಟದ ಬಗ್ಗೆ ಉಲ್ಲೇಖಿಸಿದ ಪ್ರಧಾನಮಂತ್ರಿಯವರು, ಕ್ರೀಡಾಕೂಟದಲ್ಲಿ ಭಾಗವಹಿಸಿದ ಹಲವು ಮಂದಿ ಕ್ರೀಡಾಪಟುಗಳು ಖೇಲೋ ಇಂಡಿಯಾ ದ ಕೊಡುಗೆಯಾಗಿದ್ದಾರೆ. ಕರ್ನಾಟಕದ ಈಜುಗಾರ್ತಿ ಧಿನಿಧಿ ದೇಸಿಂಗು ಅವರು ದೇಶವಾಸಿಗಳ ಹೃದಯ ಗೆದ್ದಿದ್ದಾರೆ ಎಂದರು.

<><><>

ಕೃಷಿ ಸಂಸ್ಕೃತಿಯು ನೆಲ–ಜಲ–ಬದುಕಿನ ಸಂಬಂಧವನ್ನು ಗಟ್ಟಿಗೊಳಿಸಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಅರಣ್ಯ ಪ್ರದೇಶವು ಕಡಮೆಯಾಗಿ, ಮಾನವ ಬಳಕೆಗೆ ಅಗತ್ಯವೆನಿಸಿದ ನೀರಿನ ಪ್ರಮಾಣವೂ ಕುಂಠಿತವಾಗಿದೆ. ಮೇಲ್ಪದರದ ನೀರಿನ ಮೂಲಗಳು ವೇಗವಾಗಿ ಬತ್ತುತ್ತಿವೆ ಎಂದು ಖ್ಯಾತ ಅರಣ್ಯ ಛಾಯಾಗ್ರಾಹಕ ಸೇನಾನಿ ಅವರು ಹೇಳಿದರು. ಧಾರವಾಡದ ಸೃಜನಾ ರಂಗಮಂದಿರದಲ್ಲಿ ಆಯೋಜಿತ, ನಿರ್ದಿಗಂತ ಉತ್ಸವದ ಅಂಗವಾಗಿ ಜರುಗಿದ 'ನೆಲ–ಜಲ–ಬದುಕು' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

<><><>

**ಬೈಟ್: ಸೇನಾನಿ 35 ಸೆಕೆಂದುಗಳು**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..**